**PW- 1**

**ದಿನಾಂಕಃ 26-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. ಎಲ್ ಬಿ ಎಂ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

ಮೂಲ ಆದಾರ ಕಾರ್ಡ ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯ್ತು.

ಮೂಲ ಪ್ಯಾನ್ ಕಾರ್ಡ ನೋಡಿ ಗುರುತಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯ್ತು.

ಮೂಲ ಬ್ಯಾಂಕ್ ಪಾಸ್ ಪುಸ್ತಕ ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯ್ತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಪಿ ಕೆ ಎಂ ವಕೀಲರಿಂದಃ**

1. ನಾನು ಬಿ ಕಾಂ ಪಧವಿದರ. ನಾನು ಈಗ ರಟ್ಟಿಹಳ್ಳಿ ತಾಲೂಕಿನ ಉಪ ತಹಶೀಲ್ದಾರ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ವಾಹನದ ನೋಂಣಿ ಸಂಖ್ಯೆ ಕೆ ಎ 68 ಇ 9683 ಅಂತಾ ಇದ್ದು ಆದರೆ ಅಪಗಾತ ಪಡಿಸಿದ ವಾಹನದ ಸಂಖ್ಯೆ ನನಗೆ ಹೇಳಲು ನೆನಪಿಲ್ಲ. ನಾನು ದಿಃ 04-10-2019 ರಂದು ಓ ಆಸ್ಪತ್ರೆ ರಾಣೇಬೆನ್ನೂರು ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಬೆನ್ನೂರು ಆಸ್ಪತ್ರೆ ರಾಣೆಬೆನ್ನೂರಿನಲ್ಲಿ ಪಡೆದಿರುತೆ್ತನೆ. ನಾನು ಬೆನ್ನೂರು ಆಸ್ಪತ್ರೆಯಲ್ಲಿ ದಿಃ 04-10-2019 ರಿಂದ 14-11-2019 ವರೆಗೆ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ನಾನು ನನ್ನ ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿ ನಾನು ಷಶಕ್ತನಾಗಿದ್ದೇನೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ದಿಃ 23-12-2019 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಾನು ರಜೆ ಹೊಂದಿದ ಬಗ್ಗೆ ತೋರಿಸಲು

ನ್ಯಾಯಾಲಯಕ್ಕೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-13 ರಂತೆ ದಾಖಲೆ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಸಂಬಂದಪಟ್ಟ ಇಲಾಖೆಯಿಂದ ರಜೆ ಇದ್ದ ಸಂದರ್ಬದಲ್ಲಿ ಸಂಬಳ ಪಡೆದಿರುತ್ತೇನೆ. ನಾನು ಇಲಾಖೆಯಿಂದ ವೈದ್ಯಕಿಯ ಚಿಕಿತ್ಸೆ ಪಡೆದುಕೊಂಡ ಹಣ ಮರಳಿಸಿಕೊಂಡಿಲ್ಲ. ನಿಪಿ-9 ರಂತೆ 1 ಲಕ್ಷ ಹಣ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಅದು ನನ್ನ ಉಳಿತಾಯದ ಹಣ ಇತ್ತು.

2. ನಿಪಿ-10 ಬಿಲ್ಲುಗಳಿಗೆ ವೈದ್ಯಕೀಯ ಸಲಹಾ ಚೀಟಿ ದಾಖಲಿಸಿಲ್ಲ ಎಂದರೆ ಸದರಿ ಆಸ್ಪತ್ರೆಯಲ್ಲಿ ಮೆಡಿಕಲ್ ಸ್ಯಾಪ್ ಇತ್ತು ಅವರು ಹೇಳಿದ್ದರಿಂದ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-9 ರಲ್ಲಿ ತೋರಿಸಿದ ಒಟ್ಟು ಮೊತ್ತ ನಿಪಿ-10 ರಲ್ಲಿ ತೋರಿಸಿ ಬಿಲ್ಲುಗಳು ಒಂದೇ ಮೊತ್ತಕ್ಕೆ ಕೊಡಲಾಗಿದೆ ಎಂದರೆ ಸರಿಯಲ್ಲ. ಪ್ರತ್ಯಕವಾಗಿ ಕೊಡಲಾಗಿದೆ ಎಂದು ಹೇಳುತ್ತಾರೆ. ನಿಪಿ-10 ದಾಖಲೆಗಳು ನೈಜತೆಯಿಂದ ಕುಡಿದೆ ಎಂದು ತೋರಿಸಲು ವೈದ್ಯರ ಸಲಹಾ ಚೀಟಿಗಳನ್ನು ಸಲ್ಲಿಸಲು ನನಗೆ ತೊಂದರೆ ಇಲ್ಲ.

3. ನಿಪಿ-10 ರಲ್ಲಿ ಮೆಡಿಕಲ್ ರಸೀದಿ ನಂ. 4426 ದಿಃ 23-10-2019 ನೇದ್ದರ ತೋರಿಸಿದ ಬಿಲ್ಲು ಹೆಚ್ಚಿಗೆ ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಚಿಕಿತ್ಸೆ ಕೊಟ್ಟ ವೈದ್ಯರನ್ನು ನ್ಯಾಯಾಲಯಕ್ಕೆ ಕರೆಸಿ ನಿಪಿ-10 ತೋರಿಸಿದ ಮಾತ್ರೆ ಮತ್ತು ಇತರ ಇತ್ಯಾದಿ ಅವರೇ ನನಗೆ ಕೊಟ್ಟಿರುತ್ತಾರೆ ಎಂದು ತೋರಿಸಲು ಅವರ ಸಾಕ್ಷಿ ಮಾಡಿಸಲು ಯಾವುದೇ ತೊಂದರೆ ಇಲ್ಲ.

4. ಈ ಹಿಂದೆ 1999 ರಲ್ಲಿ ನನಗೆ ಬೇರೆ ಅಪಘಾತವಾಗಿರು ಕಾರಣ ಹಾವೇರಿ ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೆ. ಅದರಲ್ಲಿ ನನ್ನ ಬಲಗಾಲಿನ ಮೊಣಕಾಲಿಗೆ ಮುರಿತ ಗಾಯ ಆಗಿದ್ದರಿಂದ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೆ. ಅದರ ಚಿಕಿತ್ಸೆಗಾಗಿ ನಾನು ದಾವಣಗೆರೆ ಎಂ ಆರ್ ಜೈಪ್ರಕಾಶ ರವರಲ್ಲಿ ಶಸ್ತ ಚಿಕಿತ್ಸೆ ಮಾಡಿಸಿಕೊಂಡಿದ್ದೆ. ಪರಿಹಾರ ಪಡೆದಿರುತ್ತೇನೆ. ಈ ಹಿಂದೆ ಪರಿಹಾರ ಪಡೆದಿದೆ ಎಂದು ಈ ಅರ್ಜಿಯಲ್ಲಿ ತೋರಿಸಿಲ್ಲ ಎಂದರೆ ನಿಜ. ಹಳೆಯ ಅಪಘಾತ ಕಾಲು ಮೂರಿತದ ಬಗ್ಗೆ ನಾನು ಈ ಅರ್ಜಿಯಲ್ಲಿ ತೋರಿಸಿಲ್ಲ ಎಂದರೆ ನಿಜ. ಆಗ ನನ್ನದು ದೊಡ್ಡದಾದ ಶಸ್ತ ಚಿಕಿತ್ಸೆ ಆಗಿದ್ದು ಕಾರಣ 6 ತಿಂಗಳವರಗೆ ರಜೆಯಲ್ಲಿ ಇದ್ದೆ. ಸದರಿ ಆ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ದಾಖಲೆಗಳು ನನ್ನ ಬಳಿ ಇಲ್ಲ.

**PW- 1**

5. ಈ ಹಿಂದೆ ಹಾಕಿರು ಅರ್ಜಿಯಲ್ಲಿ ನನಗೆ ಓಡಾಡಲು ಮತ್ತು ಸರಿಯಾಗಿ ಕರ್ತವ್ಯ ನಿರ್ವಹಿಸಲು ಅನಾನುಕುಲ ಇದೆ ಎಂದು ಅರ್ಜಿ ಹಾಕಿದ್ದೆ. ನನ್ನದು ಅಂಗನ್ಯೂನ್ಯತೆ ಆಗಿದೆ ಎಂದು ಆ ಪ್ರಕರಣದಲ್ಲಿ ಹೇಳಿಲ್ಲ. ನನಗೆ ಆ ತೀರ್ಪಿನ ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನನಗೆ ದ್ವಿ ಚಕ್ರ ವಾಹನ ಓಡಿಸಲು ಸಾರ್ಮಥ ಇರಲಿಲ್ಲ ಎಂದರೆ ಸರಿಯಲ್ಲ. ವಾಹನ ನಿರಿಕ್ಷಕರಿಗೆ ವೈದ್ಯಕೀಯ ಸಾಮರ್ಥ ದಾಖಲೆ ಕೊಟ್ಟು ನನ್ನ ಚಾಲನಾ ಪ್ರಮಾಣ ಪತ್ರವನ್ನು ನವೀಕರಿಸಿಕೊಂಡಿರುತ್ತೇನೆ. ನಾನು ವಾಹನ ನೀರಿಕ್ಷಕರಿಗೆ 1999 ರಲ್ಲಿ ಶಸ್ತ ಚಿಕಿತ್ಸೆ ಆಗಿದ್ದ ಕುರಿತು ನವೀಕರಣ ಮಾಡುವ ಸಮದಲ್ಲಿ ಕಾಲಕಾಲಕ್ಕೆ ನಾನು ತಿಳಿಸಿಲ್ಲ ಆದರೆ ನನ್ನ ಪರೀಕ್ಷಿಸಿ ನನಗೆ ಚಾಲನಾ ಪ್ರಮಾಣ ಪತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

6. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಈ ಹಿಂದೆ 1999 ಆದ ರಸ್ತೆ ಅಪಘಾತದಲ್ಲಿ ಆದ ಗಾಯದ ಕುರಿತು, ಶಸ್ತ ಚಿಕಿತ್ಸೆ ಆದ ಬಗ್ಗೆ ಹಾಗೂ ಪರಿಹಾರ ಕೇಳಿದ ಬಗ್ಗೆ ಮರೆ ಮಾಚಿ ತಪ್ಪು ನಿರೂಪಣೆ ಮಾಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗಾಗಲೇ ಶಸ್ತ ಚಿಕಿತ್ಸೆ ಆಗಿದ್ದರಿಂದ ಮತ್ತು ನನ್ನ ಅಂಗನ್ಯೂನತೆ ಇರುವ ಕಾರಣ ದ್ವಿ ಚಕ್ರ ವಾಹನ ಚಾಲನೆ ಮಾಡಲು ನನಗೆ ಸರಿಯಾಗಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ವಾಹನ ನೀರಿಕ್ಷಕರಿಗೆ ಶಸ್ತ ಚಿಕಿತ್ಸೆಯ ವಿಷಯ ಮರೆ ಮಾಚಿ ಸುಳ್ಳು ರೀತಿಯಿಂದ ಚಾಲನಾ ಪ್ರಮಾಣ ಪತ್ರ ನವೀಕರಿಕೊಂಡು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನದು ಕೂಡಾ ನಿರ್ಲಕ್ಷತನ ಮತ್ತು ಅಜಾಗ್ರುಕತೆ ಹಾಗು ಅಸಮರ್ಥೆ ಇದೆ ಎಂದರೆ ಸರಿಯಲ್ಲ. ನಾನು ತಪ್ಪು ನಿರೂಪಣೆ ಮಾಡುತ್ತಿದ್ದರಿಂದ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರರು ಪರಿಹಾರ ಕೊಡುಬೇಕು ಎಂದು ಮಾಡು ವಾದ ಸರಿಯಲ್ಲ ಎಂದರೆ ಸರಿ.

**ಮರು ವಿಚಾರಣೆ: ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.